## ಮಂಗಳ ಗೌರಿ ಓಟ

ಕಲರ್ಸ್ ಕನ್ನಡದ 'ಮಂಗಳಗೌರಿ ಮದುವೆ'ಯಲ್ಲಿ ಗಂಡನ ತಲೆಯ ಮೇಲೆ ಗಿಡದಕುಂಡ ಬಿದ್ದಿರುತ್ತದೆ. ಮನೆಯವರು ತಕ್ಷಣ ಕಾರಿನಲ್ಲಿ ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ಮಂಗಳ ಗೌರಿಯನ್ನು ಮಾತ್ರ ಮನೆಯಲ್ಲೇ ಬಿಟ್ಟು ಹೊರಡುತ್ತಾರೆ. ಅವರು ಹೋದ ಮೇಲೆ ಗೌರಿ ಓಡುತ್ತ ಆಸ್ಪತ್ರೆಗೆ ಹೋಗುತ್ತಾಳೆ. ಒಂದು ದಿನದ ಕಂತು ಮುಗಿದರೂ ಆಕೆಯ ಓಟ ಮಾತ್ರ ನಿಂತಿಲ್ಲ. ಆಕೆಗೆ ಆಸ್ಪತ್ರೆಯಂತೂ ಸಿಕ್ಕಿಲ್ಲ. ರಸ್ತೆಯಲ್ಲಿ ಓಡುವುದನ್ನೇ ವೀಕ್ಷಕ ಗಂಟೆಗಟ್ಟಲೇ ನೋಡುವಂತೆ ಮಾಡುವುದು ಮೂರ್ಖತನವನ್ನು ತೋರಿಸುವುದಿಲ್ಲವೇ?

—ಎಸ್.ಎಸ್. ಚಂದ್ರಶೇಖರ್, ಬೆಂಗಳೂರು

## ಶಿಕ್ಷಣ ವಾಣಿ

ಚಂದನದಲ್ಲಿ ಎಸ್.ಎಸ್.ಎಲ್.ಸಿ. ಮಕ್ಕಳ ಪರೀಕ್ಷಾ ಸಿದ್ಧತೆಗೆ ಪುನರ್ಮನನ ಮಾಡಿಸುವ ದೃಷ್ಟಿಯಿಂದ ರೂಪಿಸಿದ 'ಶಿಕ್ಷಣ ವಾಣಿ' ಉತ್ತಮ ಪ್ರಯತ್ನ. ಇದೇ ರೀತಿಯಲ್ಲಿ ಬೇರೆ ಬೇರೆ ಭಾಷೆಗಳಲ್ಲೂ ಆಯಾ ವಾಹಿನಿಗಳಲ್ಲಿ ಪ್ರಸಾರವಾಗುತ್ತಿದೆ. ಕನ್ನಡದ ಕೆಲವು ಭಾಗಗಳನ್ನು ವೀಕ್ಷಿಸಿದಾಗ ನಿರೂಪಕರ ಭಾಷಾ ಸಂವಹನದಲ್ಲಿ ಕೊರತೆ ಇದೆ ಎಂದೆನಿಸಿತು. ಅದರಲ್ಲೂ ಗಣಿತ ನಿರೂಪಣೆಯಲ್ಲಿ ಅದರ ಕೊರತೆ ಎದ್ದು ಕಾಣುತ್ತಿತ್ತು. ನಾನೂ ಗಣಿತ ಶಿಕ್ಷಕಿಯಾಗಿ ಎರಡು ದಶಕಗಳ ಅನುಭವದ ಹಿನ್ನೆಲೆಯಲ್ಲಿ ಹೇಳುವುದಾದರೆ, ಮಕ್ಕಳಿಗೆ ಸುಲಭವಾಗಿ ತಲುಪಲು ಸುಲಭ ಭಾಷೆ ಮತ್ತು ನಿರೂಪಣೆ ಮುಖ್ಯ. ಮಕ್ಕಳು ಯಾವುದೇ ಕಲಿಕಾ ಮಟ್ಟದಲ್ಲೇ ಇದ್ದರೂ ಅವರು ಸರಳವಾಗಿ ಕಲಿಯಲು ಅನುಕೂಲವಾಗುತ್ತದೆ.

—ಉಷಾ ಎಸ್. ಬೆಂಗಳೂರು

ವಾರದ ಪತ್ರ

## ಯಾವ ಸಂದೇಶ?

ಕಲರ್ಸ್ ಕನ್ನಡದಲ್ಲಿ ಮತ್ತೆ ಧಾರಾವಾಹಿಗಳು ಆರಂಭವಾಗಿವೆ. ಇದ್ದುದರಲ್ಲಿ 'ಕನ್ನಡತಿ' ಸ್ವಲ್ಪ ಪರವಾಗಿಲ್ಲ ಅನಿಸುತಿತ್ತು. ಆದರೆ ಅದು ದಾರಿ ತಪ್ಪುತ್ತಿರುವ ಲಕ್ಷಣಗಳು ಇತ್ತೀಚೆಗೆ ಗೋಚರಿಸುತ್ತಿವೆ. ಕೆಲವು ಹಿಂದಿನ ಕಂತುಗಳಲ್ಲಿ ಹರ್ಷನಿಗೆ ವಿಪರೀತ ಶೀತವಾಗಿ ಜ್ವರ ಬಂದಿರುತ್ತದೆ. ಸಾಮಾನ್ಯ ಶೀತ ಸಿಗರೇಟು ಸೇದಿದರೆ ಕಡಿಮೆಯಾಗುತ್ತದೆ ಎಂದು ಹೇಳಿ ಅವನು ಅದನ್ನು ನಿರ್ಲಕ್ಷಿಸುತ್ತಾನೆ. ಹೋಟೆಲ್‌ನಲ್ಲಿ ಅವನಿಗೆ ಪ್ರವೇಶ ನಿರಾಕರಿಸಲಾಗುತ್ತದೆ. ಕೊರೊನಾ ಭೀತಿಯಿಂದಾಗಿ ಮನೆಯವರು ಅವನನ್ನು ಮನೆಗೆ ಬರಬೇಡಿ ಎಂದು ಹೇಳುತ್ತಾರೆ. ಕೊನೆಗೆ ಬುವಿ ಅವನನ್ನು ತನ್ನ ಮನೆಗೆ ಆಹ್ವಾನಿಸುತ್ತಾಳೆ. ಕಾರ್ ಡ್ರೈವ್ ಮಾಡುವಾಗ ಹರ್ಷ ವಿಪರೀತ ಸೀನುತ್ತಿರುತ್ತಾನೆ. ತನ್ನಲ್ಲಿದ್ದ ಕರವಸ್ತ್ರವನ್ನೂ ಮೂಗಿಗೆ ಕಟ್ಟಿಕೊಳ್ಳುವುದಿಲ್ಲ.

ಕಾರಿನ ಹಿಂದಿನ ಸೀಟ್ ಖಾಲಿಯಿದ್ದರೂ ಬುವಿ ಕಾರಿನ ಮುಂದಿನ ಸೀಟಿನಲ್ಲಿ ಹರ್ಷನ ಪಕ್ಕದಲ್ಲೇ ಕುಳಿತಿರುತ್ತಾಳೆ. ಅವಳೂ ಮೂಗಿಗೆ ಏನನ್ನೂ ಕಟ್ಟಿಕೊಂಡಿರುವುದಿಲ್ಲ. ಮನೆಗೆ ಹೋದ ಮೇಲೂ ಅವರು ಎದುರು ಬದುರಾಗಿ ಕುಳಿತು ಮಾತನಾಡುತ್ತಾರೆ. ಬುವಿ– ಹರ್ಷನಿಗಾಗಿ ಔಷಧಗಳನ್ನು ಖರೀದಿಸಿ ತರುತ್ತಾಳೆ. ಆದರೆ ಕೊರೊನಾ ಬಗ್ಗೆ ಹರ್ಷನ ಮನೆಯವರಿಗೆ ಇದ್ದ ಭಯ ಹರ್ಷನಿಗಾಗಲಿ ಬುವಿಗಾಗಲಿ ಏಕಿಲ್ಲ? ಕರ್ನಾಟಕದಲ್ಲಿ ಕೊರೊನಾ ಅತಿ ವೇಗವಾಗಿ ಹರಡುತ್ತಿರುವ ಈ ಸಂದರ್ಭದಲ್ಲಿ ಈ ಕಂತುಗಳು ವೀಕ್ಷಕರಿಗೆ ಯಾವ ಸಂದೇಶವನ್ನು ನೀಡುತ್ತವೆ?

—ಮುರಲೀಧರ ಕುಲಕರ್ಣಿ, ಬೀದರ್

## ಆಕರ್ಷಕ ಮಾಲ್ಗುಡಿ ಡೇಸ್

ಕೊರೊನಾದಿಂದಾಗಿ ಹಳೆಯ ಜನಪ್ರಿಯ ಧಾರಾವಾಹಿಗಳನ್ನು ಮರು ಪ್ರಸಾರ ಆಗುತ್ತಿವೆ. ಝೀ ಕನ್ನಡದಲ್ಲಿ 'ಮಾಲ್ಗುಡಿ ಡೇಸ್' ಧಾರಾವಾಹಿಯನ್ನು ಅದೂ ಕನ್ನಡದಲ್ಲಿಯೇ ಪ್ರಸಾರ ಮಾಡಲು ಪ್ರಾರಂಭಿಸಿದೆ. ಇದು ಅತೀ ಸಂತೋಷದ ಸಂಗತಿ. 1987–88ರಲ್ಲಿ ಅಂತರರಾಷ್ಟ್ರೀಯ ಜಾಲದಲ್ಲಿ ಹಿಂದಿಯಲ್ಲಿ ಪ್ರಸಾರವಾಗಿದ್ದು ಜನರ ಮೆಚ್ಚುಗೆಗೆ ಪಾತ್ರವಾಗಿತ್ತು. ಕನ್ನಡದ ಖ್ಯಾತ ನಿರ್ದೇಶಕ, ನಟ ಶಂಕರನಾಗ್ ನಿರ್ದೇಶನದಲ್ಲಿ ಇದು ಮೂಡಿಬಂದಿದೆ. ಸ್ವಾತಂತ್ರ್ಯ ಪೂರ್ವದ ಕಾಲಘಟ್ಟದ ಸನ್ನಿವೇಶಕ್ಕೆ ತಕ್ಕಂತೆ ಚಿತ್ರೀಕರಣ ನಡೆದಿದ್ದು, ಆರ್.ಕೆ. ನಾರಾಯಣ ಅವರ ಮಾಲ್ಗುಡಿ ಡೇಸ್ ಕಥೆಗಳನ್ನು ಆಧರಿಸಿ ಕಥೆಯನ್ನು ಹೆಣೆಯಲಾಗಿದೆ. ಸುಂದರ ಕಥೆಯ ಜೊತೆಗೆ ಸಂಸ್ಕೃತಿಯನ್ನು ಚಿತ್ತಾಕರ್ಷಕವಾಗಿ ಕಟ್ಟಿಕೊಟ್ಟಿದ್ದಾರೆ. ಪ್ರತಿ ಸನ್ನಿವೇಶವೂ ಕಳೆ ಕಟ್ಟಿದೆ. ಈ ಧಾರಾವಾಹಿಯಲ್ಲಿ ಶಂಕರನಾಗ್, ಅನಂತನಾಗ್, ವಿಷ್ಣುವರ್ಧನ್, ವೈಶಾಲಿ ಕಾಸರವಳ್ಳಿ ಅಶೋಕ ಬಾದರದಿನ್ನಿ ಮತ್ತು ಮಾಸ್ಟರ್ ಮಂಜುನಾಥ ಅಭಿನಯಿಸಿದ್ದಾರೆ. ಎಲ್. ವೈದ್ಯನಾಥನ್ ಸಂಗೀತ ನಿರ್ದೇಶನ ಮಾಡಿದ್ದಾರೆ. ಅನೇಕ ಜೀವನ ಮೌಲ್ಯಗಳನ್ನು, ಸಾಮಾಜಿಕ ಸಂಬಂಧದ ನೈಜ ಚಿತ್ರಣವನ್ನು ನೀಡಿದೆ.

—ಕೆ.ಪಿ. ರಾಮಗುಂಡಿ. ಬೈಲಹೊಂಗಲ

## ಓಲ್ಡ್ ಈಸ್ ಗೋಲ್ಡ್

ನೈಜತೆ ಇಲ್ಲದ, ಸಹಜತೆ ಕಾಣದ ಒಂದೇ ಬಗೆಯ ಕಥೆಗಳನ್ನು ಟೀವಿಗಳು ಬಿಂಬಿಸುವುದನ್ನು ಕಾಣುತ್ತೇವೆ. ಅವು ಬೇಕೆಂತಲೇ ಎಳೆಯುವುದನ್ನು ನೋಡಿ ನೋಡಿ ರುಚಿ ಕೆಡಿಸಿಕೊಂಡ ಸಮಯದಲ್ಲಿ ಝೀ ಕನ್ನಡದಲ್ಲಿ 'ಮಾಲ್ಗುಡಿ ಡೇಸ್' ಕನ್ನಡ ಅವತರಣಿಕೆ ಪ್ರಸಾರ ಮಾಡುತ್ತಿರುವುದು ಶ್ಲಾಘನೀಯ.

ಇದರ ಮೂಲಕ ಶಂಕರನಾಗ್ ನಿರ್ದೇಶನದ ಪ್ರತಿಭೆ ಅರಿವಾಗುತ್ತಿದೆ. ಇಂಗ್ಲಿಷ್‌ನ ಪ್ರಮುಖ ಕಥೆಗಾರ ಮೈಸೂರಿನ ಆರ್.ಕೆ. ನಾರಾಯಣ ನಮ್ಮನ್ನು ಮುಕ್ಕಾಲು ಶತಮಾನದ ಹಿಂದೆ ಒಯ್ದಿದ್ದಾರೆ. ಇಲ್ಲಿನ ಪಾತ್ರಗಳ ಚಿತ್ರಣ ಹಾಗೂ ವಸ್ತ್ರ ವಿನ್ಯಾಸ ಆ ಕಾಲದ ವಾಸ್ತವವನ್ನು ತೋರಿಸುತ್ತದೆ. ಮಹಾತ್ಮ ಗಾಂಧಿಯವರ ಪ್ರಸ್ತುತತೆ ಹಾಗೂ ಬಾಲಕರಿಂದ ವೃದ್ಧರ ತನಕ ಇರುವ ರಾಷ್ಟ್ರಾಭಿಮಾನದ ಕಿಚ್ಚು ಇಂದಿನ ಪೀಳಿಗೆಗೂ ಅರ್ಥವಾಗುವಂತೆ ಮಾಡಿದ್ದಾರೆ. ಕನ್ನಡಕ್ಕೆ ತರುವಾಗ ಸಾಧ್ಯವಾದಷ್ಟು ಆಯಾ ನಟರ ಧ್ವನಿಯನ್ನೇ ಅಳವಡಿಸಿದರೆ ಇನ್ನು ಆಕರ್ಷಣೀಯವಾಗುತಿತ್ತು.

—ಬೀರಣ್ಣ ನಾಯಕ ಮೊಗಟಾ

## ಕವಿಗಳಾದರೂ ಭಾಷೆ ತಿಳಿಯಲಿ

ಚಂದನದಲ್ಲಿ ಇತ್ತೀಚೆಗೆ ಪ್ರಸಾರ ಮಾಡಿದ ಕವಿಗೋಷ್ಠಿ ಒಳ್ಳೆಯ ಪ್ರಯತ್ನ. ಆದರೆ, ಇದರಲ್ಲಿ ಭಾಗವಹಿಸಿದ್ದ ಯುವ ಕವಿಗಳಲ್ಲಿ ಒಬ್ಬರ ಬಗ್ಗೆ ತಕರಾರು ಎತ್ತಲೇಬೇಕಾಗಿದೆ. ಅವರ ಕನ್ನಡ ಉಚ್ಚಾರದಲ್ಲಿ 'ಅ' ಕಾರಗಳೆಲ್ಲ 'ಹ'ಕಾರದಲ್ಲಿ ಉಚ್ಚಾರಣೆ ಮಾಡುತ್ತಿದ್ದರು. ಅವರು ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನವನ್ನು ಮಾಡದೇ ಇರುವುದು ವಿಷಾದನೀಯ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಕಂತಿಗೂ ಮಿತಿ ಇರಲಿ

ಕಲರ್ಸ್ ಸೂಪರ್‌ನ 'ಮಗಳು ಜಾನಕಿ' 470 ಸಂಚಿಕೆಯ ನಂತರ ನಿಂತಿದೆ. ಕಥೆಗೆ ತಾರ್ಕಿಕ ಅಂತ್ಯ ಕೊಡಲಾಗಲಿಲ್ಲ ಎಂದು ನಿರ್ದೇಶಕರು ಹೇಳಿದ್ದು ನಗೆಪಾಟಲು ಎಂದೆನಿಸುತ್ತದೆ. ಕಥೆಯನ್ನು ಅನಗತ್ಯವಾಗಿ ಬೆಳೆಸಿದ್ದು ಅಕ್ಷಮ್ಯ. ಎರಡು ವರ್ಷಗಳ ನಂತರವೂ ಭಾರ್ಗಿಗೆ ಶಿಕ್ಷೆ ಆಗಲಿಲ್ಲ. ತಂದೆ–ಮಗಳು, ತಾಯಿ–ಮಗ ಎನ್ನುವ ಅರಿವಾಗಲಿಲ್ಲ. ಜಾನಕಿ–ನಿರಂಜನ ದಂಪತಿ ಆಗಲೇ ಇಲ್ಲ. ದೇವಕಿಯ ಗಂಡನ ಪಾತ್ರ ಸೇರಿದಂತೆ ಕೆಲವು ಪಾತ್ರಗಳು ಸಮರ್ಪಕವಾಗಿ ಅನಾವರಣವಾಗಲಿಲ್ಲ. ಧಾರಾವಾಹಿಗಳು ನಿರ್ದಿಷ್ಟ ಕಂತುಗಳಲ್ಲಿ ಮುಕ್ತಾಯವಾಗುವಂತೆ ಆಗಲಿ ಎಂದು ಆಶಿಸುತ್ತೇನೆ.

—ಕೆ.ಎಸ್. ಚಂದ್ರಶೇಖರ್, ಮೈಸೂರು

ಸೀತಾರಾಮ್ ಜಾನಕಿಗೆ ನ್ಯಾಯ ಕೊಡಿಸುತ್ತಿದ್ದರು. ಅದು ವಿಧಿಗೆ ಇಷ್ಟವಿಲ್ಲ. ಅದಕ್ಕಾಗಿಯೇ ಮಗಳು ಜಾನಕಿಗೆ ನೂರೆಂಟು ವಿಘ್ನ!

—ಪಿ.ಜೆ. ರಾಘವೇಂದ್ರ ಮೈಸೂರು